## ನಗರಸಭೆ, ಚಿಕ್ಕಮಗಳೂರು

ಸಂಖ್ಯೆ:ಸಿಎಂಸಿ:ಸಿಕೆಎಂ:ಕುನೀಶ:ಸಿ.ಆರ್:01:2007-08 ದಿನಾಂಕ: 28-08-2007.

### –:ಟೆಂಡರ್ ಪ್ರಕಟಣೆ:–

ಚಿಕ್ಕಮಗಳೂರು ನಗರಸಭೆಯಲ್ಲಿ ಈ ಕೆಳಕಂಡಂತೆ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತರಾದ ಅರ್ಹ 4 ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ದರಗಳನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ದರಗಳನ್ನು ಸಲ್ಲಿಸಲು ಇಚ್ಛಿಸುವವರು ತಮ್ಮ ನೊಂದಣಿ ಪ್ರಮಾಣಪತ್ರದೊಂದಿಗೆ ಇಎಂಡಿ ಮೊತ್ತವನ್ನು ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು ರವರ ಹೆಸರಿಗೆ ಡಿ.ಡಿ ಅಥವಾ ಪೇ ಆರ್ಡರ್‌ಗಳನ್ನು ಪಡೆದು ಟೆಂಡರ್‌ನೊಂದಿಗೆ ಲಗತ್ತಿಸಿ ಟೆಂಡರ್‌ಗಳನ್ನು ದ್ವಿ ಪ್ರತಿಯೊಂದಿಗೆ ಭರ್ತಿ ಮಾಡಿ ದಿನಾಂಕ:**04-10-2007** ರಂದು ಸಮಯ ಸಂಜೆ **5-00** ರೊಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗಾಗಲೀ ಅಥವಾ ಅವರಿಂದ ಅಧಿಕಾರ ಹೊಂದಿದವರಿಗಾಗಲೀ ಟೆಂಡರ್ ಸಲ್ಲಿಸತಕ್ಕದ್ದು. ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಟೆಂಡರ್‌ಗಳನ್ನು ಸಾಧ್ಯವಾದಲ್ಲಿ ಇದೇ ದಿನಾಂಕದಂದು ಹಾಜರಿದ್ದ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಟೆಂಡರ್ ತೆರೆಯುವ ಮುಂದಿನ ದಿನಾಂಕವನ್ನು ಈ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಚುರಪಡಿಸಲಾಗುವುದು

1) ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಹಾಗೂ ಖಾಲಿ ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ: 03-10-2007 ಸಂಜೆ 5-30 ರವರೆಗೆ.

2) ಭರ್ತಿ ಮಾಡಿದ ಟೆಂಡರ್‌ಗಳನ್ನು ಕಛೇರಿಗೆ ಸಲ್ಲಿಸುವ ದಿನಾಂಕ: 04-10-2007. ಸಂಜೆ 5-00 ರವರೆಗೆ

**ಶೆಡ್ಯೂಲ್**

| ಕ್ರ. ಸಂ. | ವಾರ್ಡ್ ಸಂಖ್ಯೆ. | ಕಾಮಗಾರಿಗಳ ವಿವರ | ಅಂದಾಜು ಮೊತ್ತ | ಠೇವಣಿ | ಟೆಂಡರ್ ಫಾರಂ ಬೆಲೆ | ಅವಧಿ |
|---|---|---|---|---|---|---|
| 1 | **0** | **ಚಿಕ್ಕಮಗಳೂರು ನಗರಕ್ಕೆ ನಿರೋದಗಿಸುವ ಹಿರೆಕೊಳಲೆ ಕೆರೆಗೆ ಮುಳ್ಳಯ್ಯನಗಿರಿ ಫೀಡರ್ ಛಾನಲ್‌ನ್ನು ಅಭಿವೃದ್ಧಿಪಡಿಸುವುದು, ಸರಪಳಿ 0.00 ರಿಂದ 1550 ಮೀ ಕಾಂಕ್ರೀಟ್ ಲೈನಿಂಗ್** | 400000.00 | 10000 | 1000 | 01 ತಿಂಗಳು |
| 2 | **1-2,** | **ಚಿಕ್ಕಮಗಳೂರು ನಗರಕ್ಕೆ ನಿರೋದಗಿಸುವ ಹಿರೆಕೊಳಲೆ ಕೆರೆಗೆ ಮುಳ್ಳಯ್ಯನಗಿರಿ ಫೀಡರ್ ಛಾನಲ್‌ನ್ನು ಅಭಿವೃದ್ಧಿಪಡಿಸುವುದು,ಸರಪಳಿ 1551 ರಿಂದ 1640 ಮೀ ಕಾಂಕ್ರೀಟ್ ಲೈನಿಂಗ್,** | 400000.00 | 10000 | 1000 | 01 ತಿಂಗಳು |
| 3 | **1-3,** | **ಚಿಕ್ಕಮಗಳೂರು ನಗರಕ್ಕೆ ನಿರೋದಗಿಸುವ ಹಿರೆಕೊಳಲೆ ಕೆರೆಗೆ ಮುಳ್ಳಯ್ಯನಗಿರಿ ಫೀಡರ್ ಛಾನಲ್‌ನ್ನು ಅಭಿವೃದ್ಧಿಪಡಿಸುವುದು,ಸರಪಳಿ 1641 ರಿಂದ 1700 ಮೀ ಗೈಡ್‌ವಾಲ್ ನಿರ್ಮಾಣ ಮತ್ತು ಡ್ರಾಪ್ ಸಿಸ್ಟನ್ ನಿರ್ಮಾಣ.** | 320000.00 | 8000 | 800 | 01 ತಿಂಗಳು |
| 4 | **0** | **ರತ್ನಗಿರಿ ಬೋರೆ ಬಡಾವಣೆಯಲ್ಲಿ ನೆಲಮಟ್ಟದ ಜಲಸಂಗ್ರಹಗಾರ ನಿರ್ಮಾಣ.** | 500000.00 | 12500 | 1250 | 01 ತಿಂಗಳು |
| 5 | **0** | **ಚಿಕ್ಕಮಗಳೂರು ನಗರದ ರತ್ನಗಿರಿ ನೀರು ಶುದ್ಧೀಕರಣ ಘಟಕದಿಂದ ನೆಲಮಟ್ಟದ ಜಲಸಂಗ್ರಹಾಗಾರದ ವರೆಗೆ ಏರು ಕೊಳವೆ ಮಾರ್ಗ ಅಳವಡಿಸುವುದು.** | 400000.00 | 10000 | 1000 | 01 ತಿಂಗಳು |

**:ಷರತ್ತುಗಳು:**

1 ಕಾಮಗಾರಿಗಳ ಗುಣಮಟ್ಟ ಕಾಪಾಡುವ ಹಿತದೃಷ್ಟಿಯಿಂದ ಅಂದಾಜು ಮೊತ್ತಕ್ಕಿಂತ ಕಡಿಮೆ ದರ ನಮೂದಿಸಿದ್ದಲ್ಲಿ ಅಂದಾಜಿನ ವ್ಯತ್ಯಾಸದ ಮೊತ್ತದ ಹಣವನ್ನು ಡಿ.ಡಿ. ರೂಪದಲ್ಲಿ ಟೆಂಡರ್ ಜೊತೆ ಲಗತ್ತಿಸಿ ಸಲ್ಲಿಸಬೇಕು ತಪ್ಪಿದ್ದಲ್ಲಿ ಟೆಂಡರನ್ನು ತಿರಸ್ಕರಿಸಲಾಗುವುದು.

2 ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತದೆ.

3 ಟೆಂಡರ್ ನಿಬಂಧನೆಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಕಾಮಗಾರಿ ಶಾಖೆಯಲ್ಲಿ ಪಡೆದುಕೊಳ್ಳಬಹುದು.

4 ಕಾಮಗಾರಿಯು ಪೂರ್ಣಗೊಂಡ ನಂತರ 3ನೇ ವ್ಯಕ್ತಿಯಿಂದ ಕಾಮಗಾರಿ ಗುಣಮಟ್ಟದ ಬಗ್ಗೆ ದೃಡೀಕರಣ ಪತ್ರವನ್ನು ಸಲ್ಲಿಸಿದ ನಂತರ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.

5 ಕಾಮಗಾರಿಯು ಪೂರ್ಣಗೊಂಡ ನಂತರ ಎರಡು ವರ್ಷ ನಿರ್ವಹಣೆಯನ್ನು ಗುತ್ತಿಗೆದಾರರೇ ನಿರ್ವಹಿಸತಕ್ಕದ್ದು.

ಪೌರ ಆಯುಕ್ತರು

ನಗರಸಭೆ, ಚಿಕ್ಕಮಗಳೂರು.